Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in** **principal@klsvdit.edu.in**

KLS/VDIT/ Date: 23-03-2022

**ಪತ್ರಿಕಾ ಪ್ರಕಟಣೆ:**

## ವಿ.ತಾ.ವಿ ಮಹಿಳೆಯರ ಜುಡೋ ತಂಡದ ತರಬೇತಿ ಶಿಬಿರ ಮುಕ್ತಾಯ

ಕರ್ನಾಟಕ ಲಾ ಸೊಸೈಟಿಯ ವಿಶ್ವನಾಥರಾವ್ ದೇಶಪಾಂಡೆ ತಾಂತ್ರಿಕ ಮಹಾವಿದ್ಯಾಲಯ, ಹಳಿಯಾಳದಲ್ಲಿ ಮಾರ್ಚ್ 18 ರಿಂದ ಮೂರು ದಿನಗಳ ಕಾಲ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ(ವಿ.ತಾ.ವಿ) ಮಹಿಳೆಯರ ಜುಡೋ ತಂಡದ ತರಬೇತಿ ಶಿಬಿರ ಆಯೋಜಿಸಲಾಗಿತ್ತು. ಯುನಿವರ್ಸಿಟಿ ಬ್ಲ್ಯೂಗಳಾಗಿ ಆಯ್ಕೆಯಾದ ಮಹಾವಿದ್ಯಾಲಯದ ವಿದ್ಯಾರ್ಥಿನಿಯರಾದ ದಿವ್ಯಾ ಪಡವಲಕರ್ ಮತ್ತು ಪೂರ್ಣಿಮಾ ತೇಂಗ್ಸೆ ಅವರನ್ನೊಳಗೊಂಡ ವಿ.ತಾವಿ ಜುಡೋ ತಂಡ ಕಾನ್ಪುರದ ಛತ್ರಪತಿ ಶಾಹುಜಿ ಮಹಾರಾಜ ವಿಶ್ವವಿದ್ಯಾಲಯದಲ್ಲಿ ಮಾರ್ಚ್ 22 ರಿಂದ 24 ರ ತನಕ ನಡೆಯಲಿರುವ ಅಖಿಲ ಭಾರತ ಅಂತರ್ ವಿಶ್ವವಿದ್ಯಾಲಯಗಳ ಮಹಿಳೆಯರ ಜುಡೋ ಪಂದ್ಯಾವಳಿಯಲ್ಲಿ ಭಾಗವಹಿಸಲಿದೆ.

ಮಹಾವಿದ್ಯಾಲಯದ ಎರಡು ವಿದ್ಯಾರ್ಥಿಯರ ಹೊರತಾಗಿ ಬೆಂಗಳೂರಿನ ಡಾ.ಎ.ಐ.ಟಿ ಕಾಲೇಜಿನ ವಿಜಯಲಕ್ಷ್ಮಿ ಎಹ್. ಜೆ, ಎ.ಐ.ಇ.ಎಮ್.ಎಸ್ ಕಾಲೇಜಿನ ನಿಂಗಮ್ಮಾ ಬಿರಾದಾರ, ಎನ್.ಎಮ್.ಎ.ಎಮ್.ಐ.ಟಿ ನಿಟ್ಟೆಯ ಪ್ರಾಪ್ತಿ ಮಲ್ಯ ಅವರನ್ನು ಈ ತಂಡ ಒಳಗೊಂಡಿದೆ. ತಂಡದ ವ್ಯವಸ್ಥಾಪಕರಾಗಿ ಮಹಾವಿದ್ಯಾಲಯದ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ. ಗದಿಗೆಪ್ಪಾ ಯಳ್ಳೂರ್ ಕಾರ್ಯನಿವಹಿಸಲಿದ್ದಾರೆ ಎಂದು ಪ್ರಾಂಶುಪಾಲರಾದ ಡಾ. ವಿ ಎ ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಾಂಶುಪಾಲರು

Principal
KLS Vishwanathrao Deshpande
Institute of Technology, Haliyal


LAW SOCIETY'S
DESHPANDE
OF TECHNOLOGY
HALIYAL
Standard Operating Protocols
DOs
DON'Ts